# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್ ರವರು ನಿಯಮ 330ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಹೇಳಿಕೆ:

### ಸೂಚನೆ:

ದೇವಸ್ಥಾನಗಳ ಉಂಬಳಿ ಭೂಮಿಯನ್ನು ಭೂ ಸುಧಾರಣಾ ಕಾಯ್ದೆ ಅನ್ವಯ ಪಡೆದುಕೊಂಡು ಕೃಷಿ ಚಟುವಟಿಕೆ ನಡೆಸದೆ ಭೂ ಪರಿವರ್ತನೆ ಮಾಡಿ ಮಾರಾಟ ಮಾಡಿರುವ ಕಾರಣದಿಂದ ದೇವಸ್ಥಾನಗಳ ಪರಿಸರದ ಹತ್ತಿರ ಇರುವ ಭೂಮಿಯನ್ನು ಅನೇಕರು ಅಕ್ರಮವಾಗಿ ಅತಿಕ್ರಮಿಸಿ, ಖರೀದಿಸಿ ದೇವಸ್ಥಾನದ ಸ್ಥಳದ ಸಮೀಪವೇ ಅಕ್ರಮ ಕಟ್ಟಡಗಳನ್ನು ನಿರ್ಮಿಸಿರುವ ಕಾರಣ ಸಮಾಜದಲ್ಲಿ ಸಾಕಷ್ಟು ದೊಂಬಿ ಗಲಾಟೆಗಳು ಆಗುತ್ತಿರುವುದನ್ನು ಗಮನಿಸುತ್ತಿದ್ದೇವೆ. ಈ ಕುರಿತು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

### ಹೇಳಿಕೆ

ಮೈಸೂರು [ಧಾರ್ಮಿಕ ಮತ್ತು ದತ್ತಿ] ಇನಾಂ ಅಬಾಲಿಷನ್ ಕಾಯ್ದೆ, 1955 ಕಲಂ 12 ರಲ್ಲಿ "**ಕೃಷಿಯೇತರ ಉದ್ದೇಶಗಳಿಗಾಗಿ ಬಳಕೆ ಮಾಡಲಾದ ಕೃಷಿ ಭೂಮಿಯ ಮೇಲಿನ ಹಕ್ಕು** – ಕುರಿತು ಅಂದರೆ ಕೃಷಿ ಉದ್ದೇಶಗಳಿಗಾಗಿ ಬಳಕೆ ಮಾಡಲಾಗುತ್ತಿರುವ ಯಾವುದೇ ಜಮೀನನ್ನು ಕೃಷಿಯೇತರ ಉದ್ದೇಶಗಳ ಬಳಕೆಗಾಗಿ ಪರಿವರ್ತಿಸಿದ ಸಂದರ್ಭದಲ್ಲಿ ಮತ್ತು ಅಂತಹ ಪರಿವರ್ತನೆಯು ಆ ಸಮಯದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾಯ್ದೆಯಡಿಯಲ್ಲಿ ಪರಿಣಾಮಶೂನ್ಯವಾಗಲೀ ಅಥವಾ ಕಾನೂನುಬಾಹಿರವಾಗಲೀ ಅಲ್ಲದಿದ್ದಲ್ಲಿ ಸದರಿ ಜಮೀನಿನ ಹಿಡುವಳಿದಾರನು ಸದರಿ ಜಮೀನನ್ನು ಹೊಂದುವ ಹಕ್ಕುಳ್ಳವನಾಗಿರತಕ್ಕದ್ದು" ಎಂದು ವ್ಯಾಖ್ಯಾಯನಿಸಲಾಗಿದೆ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 ರಲ್ಲಿ "**ಬೇಸಾಯ ಮಾಡುವುದು**" ವಿವರಣೆ ಅಂದರೆ ಶೈಕ್ಷಣಿಕ, ಮತೀಯ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ರಚಿಸಲಾದ, ಆಸ್ತಿಯ ಹಿಡುವಳಿ ಹೊಂದಲು ಸಾಮರ್ಥ್ಯ ಹೊಂದಿರುವ ಸಾರ್ವಜನಿಕ ಸ್ವರೂಪದ್ದಾದ ಒಂದು ಶೈಕ್ಷಣಿಕ, ಮತೀಯ ಅಥವಾ ಧಾರ್ಮಿಕ ಸಂಸ್ಥೆಯ ಅಥವಾ ಸಂಘದ ಅಥವಾ ಒಂದು ವಿಶ್ವಸ್ಥ ಮಂಡಳಿಯ ಸಂದರ್ಭದಲ್ಲಿ ಜಮೀನನ್ನು ಅಂತಹ ಸಂಸ್ಥೆಯ ಅಥವಾ ಸಂಘದ ಅಥವಾ ವಿಶ್ವಸ್ಥ ಮಂಡಳಿಯ ನೌಕರನ ಅಥವಾ ಏಜಂಟಿನ ಖುದ್ದು ಮೇಲ್ವಿಚಾರಣೆಯಲ್ಲಿ ಬಾಡಿಗೆ ಕಾರ್ಮಿಕರನ್ನು ಗೊತ್ತುಮಾಡಿಕೊಂಡು ಅಥವಾ ನೌಕರರ ಮೂಲಕವಾಗಿ ಬೇಸಾಯ ಮಾಡಿಸಿದ್ದರೆ ಅಂತಹ ಜಮೀನನ್ನು ಖುದ್ದಾಗಿ ಬೇಸಾಯ ಮಾಡಿರುವಂತೆ ಭಾವಿಸತಕ್ಕದ್ದು ಎಂದು ವ್ಯಾಖ್ಯಾಯನಿಸಲಾಗಿದೆ.

ಮುಂದುವರೆದು, ರಾಜ್ಯದಲ್ಲಿ ಅನೇಕ ವಿಧವಾದ ಇನಾಂಗಳು, ಅಂದರೆ ವಿಶೇಷವಾಗಿ ವೈಯಕ್ತಿಕ, ಧಾರ್ಮಿಕ ಮತ್ತು ದತ್ತಿ ಅಸ್ತಿತ್ವದಲ್ಲಿದ್ದವು. ಅಲ್ಲದೆ, ರಾಜ್ಯ ಏಕೀಕರಣ ಪೂರ್ವದಲ್ಲಿ ಹಾಗೂ ನಂತರ ಇನಾಂಗಳು ರದ್ಧತಿಯಾಗುವವರೆಗೆ ರಾಜ್ಯದ ಕೆಲವು ಪ್ರದೇಶಗಳಿಗೆ ಅನ್ವಯವಾಗುತ್ತಿದ್ದ ಇನಾಂಗಳು ಸಹ ಇದ್ದವು. ಅಂತಹ ಎಲ್ಲಾ ಇನಾಂಗಳ ಮೂಲಕ ಹೊಂದಿದ್ದಂತಹ ಜಮೀನುಗಳನ್ನು ಸರ್ಕಾರವು ಇನಾಂ ರದ್ಧತಿ ಕಾಯ್ದೆ/ನಿಯಮಗಳ ಜಾರಿಗೆ ತಂದು ಸದರಿ ಜಮೀನುಗಳನ್ನು ಸರ್ಕಾರಕ್ಕೆ ನಿಹಿತಗೊಳಿಸಲಾಗಿತ್ತು. ನಂತರ

ಸದರಿ ಇನಾಂ ಜಮೀನುಗಳನ್ನು ಮತ್ತೆ ಮರು-ಮಂಜೂರು ಮಾಡಲಾಗಿತ್ತು. ಆ ಸಂದರ್ಭದಲ್ಲಿ ಮರು-ಮಂಜೂರು ಮಾಡಿಸಿಕೊಳ್ಳದೇ ಇದ್ದಂತಹವರಿಗೆ ಮತ್ತೊಮ್ಮೆ ಅವಕಾಶ ನೀಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 58 ಎಲ್‌ಆರ್‌ಎ 2021 ದಿನಾಂಕ: 15.02.2022 ರಲ್ಲಿ ಮೈಸೂರು [ಧಾರ್ಮಿಕ ಮತ್ತು ದತ್ತಿ] ಇನಾಂ ಅಬಾಲಿಷನ್ ನಿಯಮಗಳು, 1956 ಕ್ಕೆ ತಿದ್ದುಪಡಿ ತಂದು ಸದರಿ ಇನಾಂ ಜಮೀನುಗಳನ್ನು ರೀ-ಗ್ರಾಂಟ್‌ಗಾಗಿ ಅರ್ಜಿ ಸಲ್ಲಿಸಲು ಕಾಲಾವಧಿ ವಿಸ್ತರಣೆ ಮಾಡಲಾಗಿತ್ತು.

ಮೇಲಿನ ಅಂಶಗಳ ಹಿನ್ನಲೆಯಲ್ಲಿ, ಬೆಳಗಾವಿ ವಿಭಾಗ, ಮೈಸೂರು ವಿಭಾಗ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ದಾಖಲಾಗಿರುವುದಿಲ್ಲ. ಆದರೆ ಬೆಂಗಳೂರು ವಿಭಾಗದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ. ಆದರೆ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಕಸಬಾ ಹೋಬಳಿಯ ಅಧಿಸೂಚಿತ ಪ್ರವರ್ಗ 'ಸಿ' ಗೆ ಸೇರಿದ ಬಂಡಿಚಿಕ್ಕಮ್ಮ ದೇವಸ್ಥಾನದ ಜಮೀನು ಶ್ರೀಮತಿ ಸಿದ್ದಮ್ಮ ಕೋಂ ಚಿಕ್ಕಪ್ಪ ಯಾನೇ ಊಲಪ್ಪ ರವರಿಗೆ ಭೂ ನ್ಯಾಯ ಮಂಡಳಿ ಆದೇಶದ ಮೇರೆಗೆ ಎಂ.ಆರ್:59/81-82 ರಂತೆ 4-28 ಎಕರೆ ಪಹಣಿ-ಖಾತೆಯಾಗಿರುತ್ತದೆ. ನಂತರದಲ್ಲಿ ಐ.ಹೆಚ್.ಸಿ : 21/96-97 ರಂತೆ ಸಂಗಪ್ಪ ಮಂಜಪ್ಪ ಬಿನ್ ಚಿಕ್ಕಪ್ಪ ಯಾನೆ ಊಲಪ್ಪ ಜಂಟಿ ಪೌತಿ ಖಾತೆ ಬದಲಾವಣೆಯಾಗಿರುವುದು ಕಂಡುಬಂದಿರುತ್ತದೆ. ನಂತರ ಎಂ.ಆರ್:11/2004-05 ರಂತೆ ಶಶಿಕಲಾ ಕೋಂ ಲೇಟ್ ಸಂಗಪ್ಪ ಮಂಜಪ್ಪ ಚಿಕ್ಕಪ್ಪಯಾನೆ ಊಲಪ್ಪ ರವರಿಗೆ ಪೌತಿ ಖಾತೆ ಬದಲಾವಣೆಯಾಗಿರುತ್ತದೆ. ನಂತರ ಎಂ.ಆರ್ : 152/2010-11 ರಂತೆ ಶಶಿಕಲಾ ಕೋಂ ಲೇಟ್ ಸಂಗಪ್ಪ ರವರಿಗೆ 2-14 ಎಕರೆ ಮತ್ತು ಮಂಜಪ್ಪ ಬಿನ್ ಲೇಟ್ ಚಿಕ್ಕಪ್ಪ ಊಲಪ್ಪ ರವರಿಗೆ 2-14 ಎಕರೆ ವಿಭಾಗದಂತೆ ಖಾತೆ ಬದಲಾವಣೆಯಾಗಿರುತ್ತದೆ.

ತದನಂತರ ಎಂ.ಆರ್: 173/2010-11 ರಲ್ಲಿ ಪೋಡಿಯಂತೆ ಸ.ನಂ.60/1 ರಲ್ಲಿ 2-14 ಎಕರೆ ಮಂಜಪ್ಪ ಬಿನ್ ಲೇಟ್ ಚಿಕ್ಕಪ್ಪ ಯಾನೆ ಊಲಪ್ಪ ಮತ್ತು 60/2 ರಲ್ಲಿ 2-14 ಎಕರೆ ಶಶಿಕಲಾ ಕೋಂ ಲೇಟ್ ಸಂಗಪ್ಪ ಇವರಿಗೆ ಪಹಣಿ ಇಂಡೀಕರಣವಾಗಿರುತ್ತದೆ. ಸ.ನಂ.60/1 ರಲ್ಲಿ ಮಂಜಪ್ಪ ಬಿನ್ ಲೇಟ್ ಯಾನೆ ಊಲಪ್ಪ ರವರು 2-14 ಎಕರೆ ಜಮೀನನ್ನು ಹೆಚ್.ಸುರೇಶ್ ಬಿನ್ ಲೇಟ್ ಹನುಮಂತಪ್ಪ ಇವರಿಗೆ ಕ್ರಯ ಮಾಡಿದ್ದು, ಎಂ.ಆರ್.ಹೆಚ್ 96/2020-21 ರಂತೆ ಖಾತೆಯಾಗಿರುತ್ತದೆ. ನಂತರದಲ್ಲಿ ಎಂ.ಆರ್.ಟಿ 101/2022-23 ರಂತೆ ನಿವೇಶನ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮ್ಯುಟೇಶನ್ ಆದೇಶವಾಗಿರುತ್ತದೆ. ನಂತರ ಓ.ಎಸ್. 78/2020 ಎ.ಎಲ್.ಹೆಚ್.ಎಲ್.ಕೆ 38/2021-22ರ ಆದೇಶದಂತೆ ಎಂ.ಆರ್.ಹೆಚ್. 89/2021-22 ಕೋರ್ಟ್ ಬಿಡುಗಡೆ ಋಣಗಳು (ಜಿಲ್ಲಾಧಿಕಾರಿಗಳ ಆದೇಶ) ವಾಸದ ಉದ್ದೇಶದಿಂದ ವ್ಯವಸಾಯದ ಉದ್ದೇಶ ಬದಲಾಯಿಸಿದೆ. ಮುಂದುವರೆದು, ಸ.ನಂ.60/2 ರಲ್ಲಿನ 2-14 ಎಕರೆ ಜಮೀನನ್ನು ಭೂ ಪರಿವರ್ತನೆ ಹಿಂದಕ್ಕೆ ಪಡೆದಿರುವ ಆದೇಶ ಇರುವುದಿಲ್ಲ.

ಸಂಖ್ಯೆ: ಆರ್‌ಡಿ 11 ಎಲ್‌ಆರ್‌ಎಸ್ 2024

**[ಕೃಷ್ಣ ಬೈರೇಗೌಡ]**
ಕಂದಾಯ ಸಚಿವರು